**1**ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಅಥಣಿ

ಸಿ.ಸಿ. ನಂಃ **2716 / 2024**

ಫಿರ್ಯಾದುದಾರರು **1)** ಸರಕಾರದ ವತಿಯಿಂದ
ಐಗಳಿ ಪೋಲಿಸ ಠಾಣೆ.

ವಿರುದ್ದ

ಆರೋಪಿ **1)** ಶ್ರೀ ಲಕ್ಷ್ಮಣ ಕಲ್ಲಪ್ಪ ಕನ್ನಾಳ ಮತ್ತು ಇತರರು.

**<u>ದೋಷಾರೋಪಣೆ</u>**

ಶ್ರೀ ಓಂಕಾರ ಮೂರ್ತಿ, ಬಿ.ಕಾಂ., ಎಲ್.ಎಲ್.ಬಿ., **1**ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಅಥಣಿ ಆದ ನಾನು ನಿಮ್ಮ ಮೇಲೆ ಅಂದರೆ ಆರೋಪಿಃ

**1)** ಶ್ರೀ ಲಕ್ಷ್ಮಣ ಕಲ್ಲಪ್ಪ ಕನ್ನಾಳ,
ವಯಾಃ **68** ವರ್ಷ, ಉದ್ಯೋಗಃ ಶೇತ್ಕಿ,
ಸಾಃ ಕಕಮರಿ, ತಾಃ ಅಥಣಿ.

**2)** ಶ್ರೀ ಸದಾಶಿವ ಲಕ್ಷ್ಮಣ ಕನ್ನಾಳ,
ವಯಾಃ **42** ವರ್ಷ, ಉದ್ಯೋಗಃ ಶೇತ್ಕಿ,
ಸಾಃ ಕಕಮರಿ, ತಾಃ ಅಥಣಿ.

**3)** ಶ್ರೀಮತಿ ಮಹಾದೇವಿ ಕೊಂ ಲಕ್ಷ್ಮಣ ಕನ್ನಾಳ,
ವಯಾಃ **62** ವರ್ಷ, ಉದ್ಯೋಗಃ ಮನೆಗೆಲಸ,
ಸಾಃ ಕಕಮರಿ, ತಾಃ ಅಥಣಿ.

ಈ ಕೆಳಗಿನಂತೆ ದೋಷಾರೋಪಣೆಯನ್ನು ಹೊರೆಸಿದ್ದೇನೆ.

ದಿನಾಂಕ **21-04-2024** ರಂದು ಸಮಯ ಬೆಳಿಗ್ಗೆ **11.00** ಗಂಟೆ ಸುಮಾರಿಗೆ ಐಗಳಿ ಪೋಲಿಸ ಠಾಣಾ ಸರಹದ್ದಿನ, ಕಕಮರಿ ಗ್ರಾಮದ ಹದ್ದಿಯ ಜಮೀನು ರಿ.ಸ.ನಂಃ **71/3** ನೇದ್ದರಲ್ಲಿ, ಚಾಸಾ **1** ಮತ್ತು ಅವರ ಮಕ್ಕಳಾದ ಮಲ್ಲಪ್ಪ ಬೀಮಪ್ಪ ಬಸರಗಿ ಹಾಗೂ ಆಕಾಶ ಬೀಮಪ್ಪ ಬಸರಗಿ ಇವರು ಜಮೀನದಲ್ಲಿ ಕೆಲಸ ಮಾಡುತ್ತಿದ್ದಾಗ, ಆರೋಪಿತರಾದ ನೀವು ಸಂಗನಮತ ಮಾಡಿಕೊಂಡು ಬಂದು, ಚಾಸಾ **1** ರವರಿಗೆ ನಿಮ್ಮ ಜಮೀನದಲ್ಲಿ ರಸ್ತೆ ಮಾಡುತ್ತೇವೆ ಅಂತಾ ಅಂದಾಗ, ಚಾಸಾ **1** ರವರು ರಸ್ತೆ ಕುರಿತು ಅಥಣಿ ನ್ಯಾಯಾಲಯದಲ್ಲಿ ದಾವೆ ಚಾಲ್ತಿಯಲ್ಲಿರುತ್ತದೆ, ನೀವೆ

ದಾವೆಯನ್ನು ಹಾಕಿರುತ್ತೀರಿ ಅಂತಾ ಅಂದಾಗ, ಆರೋಪಿ ನಂಃ **2** ರಾದ ನೀವು ಚಾಸಾ **1** ರವರಿಗೆ ಕಾಲಿನಿಂದ ಸೊಂಟಕ್ಕೆ ಜೋರಾಗಿ ಒದ್ದು, ಸಾಮಾನ್ಯ ಸ್ವರೂಪದ ಗಾಯಪಡಿಸಿರುವಿರಿ, ಆ ಮೂಲಕ ಭಾರತ ದಂಡ ಸಂಹಿತ ಕಲಂಃ **323** ಸಹ ಕಲಂಃ **34** ರನ್ವಯ ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹ ಅಪರಾದವೆಸಗಿರುತ್ತೀರಿ.

ಅದೇ ದಿನ, ಅದೇ ಸಮಯ ಹಾಗೂ ಅದೇ ಸ್ಥಳದಲ್ಲಿ, ಸದರೀ ವಿಷಯಕ್ಕೆ ಸಂಬಂಧಪಟ್ಟಂತೆ, ಆರೋಪಿತರಾದ ನೀವು ಸಂಗನಮತ ಮಾಡಿಕೊಂಡು ಬಂದು, ಆರೋಪಿ ನಂಃ **1** ಮತ್ತು **3** ರಾದ ನೀವು ಚಾಸಾ **1** ರವರಿಗೆ ಕಲ್ಲು ಮತ್ತು ಮತ್ತು ಮಣ್ಣಿನ ಹೆಂಟೆಯಿಂದ ಹೊಡೆದು, ಸಾಮಾನ್ಯ ಸ್ವರೂಪದ ಗಾಯಪಡಿಸಿರುವಿರಿ, ಆ ಮೂಲಕ ಭಾರತ ದಂಡ ಸಂಹಿತ ಕಲಂಃ **324** ಸಹ ಕಲಂಃ **34** ರನ್ವಯ ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹ ಅಪರಾದವೆಸಗಿರುತ್ತೀರಿ.

ಅದೇ ದಿನ, ಅದೇ ಸಮಯ ಹಾಗೂ ಅದೇ ಸ್ಥಳದಲ್ಲಿ, ಸದರೀ ವಿಷಯಕ್ಕೆ ಸಂಬಂಧಪಟ್ಟಂತೆ, ಆರೋಪಿತರಾದ ನೀವು ಸಂಗನಮತ ಮಾಡಿಕೊಂಡು ಬಂದು, ಆರೋಪಿತರಾದ ನೀವು ಚಾಸಾ **1** ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ನಿಂದಿಸಿರುವಿರಿ, ಆ ಮೂಲಕ ಭಾರತ ದಂಡ ಸಂಹಿತ ಕಲಂಃ **504** ಸಹ ಕಲಂಃ **34** ರನ್ವಯ ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹ ಅಪರಾದವೆಸಗಿರುತ್ತೀರಿ.

ಅದೇ ದಿನ, ಅದೇ ಸಮಯ ಹಾಗೂ ಅದೇ ಸ್ಥಳದಲ್ಲಿ, ಸದರೀ ವಿಷಯಕ್ಕೆ ಸಂಬಂಧಪಟ್ಟಂತೆ, ಆರೋಪಿತರಾದ ನೀವು ಸಂಗನಮತ ಮಾಡಿಕೊಂಡು ಬಂದು, ಆರೋಪಿತರಾದ ನೀವು ಚಾಸಾ **1** ರವರಿಗೆ ಅವಾಚ್ಯ ಶಬ್ದಗಳಿಂದ ಬೈದು, ಕಲ್ಲು ಮತ್ತು ಮಣ್ಣಿನ ಹೆಂಟೆಯಿಂದ ಹೊಡೆದು ಹಾಗೂ ಕಾಲಿನಿಂದ ಒದ್ದು, ನಿನ್ನ ಜೀವ ಸಹಿತ ಬಿಡುವುದಿಲ್ಲ ಅಂತಾ ಜೀವ ಧಮಕಿ ಹಾಕಿರುವಿರಿ, ನಿಮ್ಮ ಈ ಕ್ರಮ ಭಾರತ ದಂಡ ಸಂಹಿತ ಕಲಂಃ **506** ಸಹ ಕಲಂಃ **34** ರನ್ವಯ ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹ ಅಪರಾದವೆಸಗಿರುತ್ತೀರಿ.

ಮೇಲಿನ ಆರೋಪಣೆಗೆ ನೀವು ಈ ನ್ಯಾಯಾಲಯದ ಮುಂದೆ ವಿಚಾರಣೆ ಎದುರಿಸಬೇಕೆಂದು ಆದೇಶಿಸುತ್ತೇನೆ.

ದಿನಾಂಕಃ 22.05.2025.

**1ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ಅಥಣಿ.**